# ವಚನ ಸಾಹಿತ್ಯದಲ್ಲಿ ಪರಿಸರ ಪ್ರಜ್ಞೆ

**ಮಾಧವ ಎಂ.ಕೆ.**

ಸಹಪ್ರಾಧ್ಯಾಪಕರು, ವಿಶ್ವವಿದ್ಯಾನಿಲಯ ಕಾಲೇಜು, ಹಂಪನಕಟ್ಟೆ, ಮಂಗಳೂರು.

**DOI: https://doi.org/10.5281/zenodo.18787468**

## ABSTRACT:

ಮಾನವ ಮತ್ತು ಪರಿಸರದ ನಡುವಿನ ಅವಿನಾಭಾವ ಸಂಬಂಧವನ್ನು 12ನೇ ಶತಮಾನದ ವಚನ ಸಾಹಿತ್ಯವು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸಿದೆ. ವಚನಕಾರರು ಪ್ರಕೃತಿಯನ್ನು ಕೇವಲ ಭೋಗದ ವಸ್ತುವಾಗಿ ನೋಡದೆ, ಅದನ್ನು ದೈವತ್ವದ ಸ್ವರೂಪವಾಗಿ ಮತ್ತು ಬದುಕಿನ ಆಧಾರವಾಗಿ ಪರಿಗಣಿಸಿದ್ದರು. ಬಸವಣ್ಣ, ಚೆನ್ನಬಸವಣ್ಣ, ಅಲ್ಲಮಪ್ರಭು ಹಾಗೂ ಅಕ್ಕಮಹಾದೇವಿಯವರ ವಚನಗಳಲ್ಲಿ ಪರಿಸರ ಸಮತೋಲನ, ಅಂತರಂಗ–ಬಹಿರಂಗ ಶುದ್ಧಿ ಮತ್ತು ಜೀವಿಗಳ ಪರಸ್ಪರ ಅವಲಂಬನೆಯ ಕುರಿತಾದ ವೈಜ್ಞಾನಿಕ ಒಳನೋಟಗಳು ಕಂಡುಬರುತ್ತವೆ. ಆಧುನಿಕ ಬದುಕಿನ ದುರಾಸೆ ಮತ್ತು ತಾಂತ್ರಿಕತೆಯ ಭರಾಟೆಯಲ್ಲಿ ಪ್ರಕೃತಿ ನಾಶವಾಗುತ್ತಿದ್ದು, ಈ ಜಾಗತಿಕ ಸಮಸ್ಯೆಗೆ ವಚನಗಳ ಮೌಲ್ಯಗಳು ಪರಿಹಾರ ನೀಡಬಲ್ಲವು. ಭವಿಷ್ಯದ ಸುಸ್ಥಿರ ಬದುಕಿಗಾಗಿ ಶರಣರ ಸರಳ ಹಾಗೂ ಪರಿಸರ ಸ್ನೇಹಿ ಜೀವನಶೈಲಿಯನ್ನು ಅಳವಡಿಸಿಕೊಳ್ಳುವ ಅಗತ್ಯವನ್ನು ಇಲ್ಲಿ ಪ್ರತಿಪಾದಿಸಲಾಗಿದೆ.

## KEYWORDS:

ವಚನ ಸಾಹಿತ್ಯ, ಪರಿಸರ ಪ್ರಜ್ಞೆ, ಪ್ರಕೃತಿ ಸಂರಕ್ಷಣೆ, ಶರಣ ಸಂಸ್ಕೃತಿ, ಅವಿನಾಭಾವ ಸಂಬಂಧ.

ವಚನಗಳು ಸಾಹಿತ್ಯದ ಒಂದು ಪ್ರಮುಖ ಹಾಗೂ ಪರಿಣಾಮಕಾರಿ ಪ್ರಕಾರವಾಗಿದ್ದು, ಅವುಗಳ ಅರ್ಥ, ಹರಹು, ಅನ್ವಯಗಳು ವ್ಯಾಪಕ. ನಮ್ಮ ನಾಡಿನಲ್ಲಿ ಅದೆಷ್ಟೋ ವಚನಕಾರರು ಆಗಿಹೋಗಿದ್ದಾರೆ. ಸಾವಿರಾರು ವಚನಗಳನ್ನು ಕಟ್ಟಿಕೊಟ್ಟು ನಮ್ಮ ಬದುಕಿಗೆ, ಭವಿಷ್ಯಕ್ಕೆ ಮುಂಬೆಳಕು ಚೆಲ್ಲಿದ್ದಾರೆ. ವಚನಗಳು ಕೇವಲ ಭಕ್ತಿ, ಅಧ್ಯಾತ್ಮ ವಿಚಾರಗಳ ಸಂಚಯವಾಗಿರದೆ, ಜನಸಾಮಾನ್ಯರ ಬದುಕಿಗೆ ಹತ್ತಿರವಾಗುವ ಮತ್ತು ಅದೆಷ್ಟೋ ಪ್ರಶ್ನೆಗಳಿಗೆ ಉತ್ತರವಾಗುವ ದಿಸೆಯಲ್ಲಿ ಎಲ್ಲರ ಮನಗಳನ್ನೂ ಮಣಿಸುವ ವಿಶೇಷ ನುಡಿಮಿಡಿತಗಳು ಎನ್ನಬಹುದು. ಜನಸಾಮಾನ್ಯರ ನಿತ್ಯಜೀವನಕ್ಕೆ ನಿಕಟವಾಗಿರುವ ದೃಷ್ಟಾಂತಗಳು ವಚನಗಳಲ್ಲಿ ಅಡಕವಾಗಿರುವುದರಿಂದ ಅವು ಎಲ್ಲರಿಗೂ ಆಪ್ತವಾಗುತ್ತವೆ ಹಾಗೂ ಆಕರ್ಷಕವೆನಿಸುತ್ತವೆ.

ಸೃಷ್ಟಿಯೆಂದರೆ ಅದು ಪ್ರಕೃತಿ. ಈ ಪ್ರಕೃತಿಯ ಆಳ ಅಗಲಗಳು ಅಳತೆಗೆ ಸಿಗಲಾರವು. ಈ ಪ್ರಕೃತಿಯ ನಡುವೆಯೇ ನಮ್ಮ ಬದುಕು ಸಾಗುತ್ತದೆ. ನಮ್ಮಲ್ಲಿ ಮತ್ತು ನಮ್ಮ ಸುತ್ತಮುತ್ತ ಕಾಣುವ, ಕಾಡುವ ಎಲ್ಲ ಭಾವನಾತ್ಮಕ, ಭೌತಿಕ ವಲಯವನ್ನು ನಮ್ಮ ಪರಿಸರವೆಂದು ಸ್ಥೂಲವಾಗಿ ಗ್ರಹಿಸಬಹುದು. ಅದು ನಮ್ಮ ಧಾರ್ಮಿಕ

ಪರಿಸರವಾಗಿರಬಹುದು, ಶೈಕ್ಷಣಿಕ ಪರಿಸರವಾಗಿರಬಹುದು, ಆಧ್ಯಾತ್ಮಿಕ ಪರಿಸರವಾಗಿರಬಹುದು ಅಥವಾ ಪರಿಸರದ ಎಲ್ಲ ಆಯಾಮಗಳು ಪಸರಿಸಿರುವ ಒಂದು ಆವರಣವೇ ಆಗಿರಬಹುದು. ಇವೆಲ್ಲವನ್ನು ಗಮನಿಸಿದರೆ ಪ್ರಮುಖ ಸಾಹಿತ್ಯ ಪ್ರಕಾರವಾಗಿರುವ ವಚನಗಳಲ್ಲಿ ಪ್ರಕೃತಿ, ಪರಿಸರಗಳ ಉಲ್ಲೇಖ, ಅನ್ವಯಗಳು ವಿವಿಧ ನೆಲೆಗಳಲ್ಲಿ ಕಂಡುಬರುತ್ತವೆ. ಪ್ರಕೃತಿಯನ್ನು, ಪರಿಸರವನ್ನು ಬದುಕಿನ ವಾಸ್ತವಕ್ಕೆ ಹೋಲಿಸುವ, ಅದರಲ್ಲೇ ನಮ್ಮ ಬದುಕು ಒಳಗೊಂಡಿರುವುದನ್ನು ಬಿಂಬಿಸುವ – ಹೀಗೆ ಹಲವು ದೃಷ್ಟಿಕೋನಗಳಿಂದ ವೈವಿಧ್ಯಮಯವಾಗಿರುವ ವಚನಗಳು ಒಂದು ರೀತಿಯಲ್ಲಿ ಜೀವನ ಚಿತ್ರವೂ ಹೌದು; ಜೀವನ ದರ್ಶನವೂ ಹೌದು, ಜೀವನಾದರ್ಶದ ಹೊಂಗಿರಣವೂ ಹೌದೆನ್ನಬಹುದು.

ಪರಿಸರ ಮತ್ತು ಮಾನವರ ನಡುವೆ ಅವಿನಾಭಾವ ಸಂಬಂಧವಿದೆ. ಮಾನವ ಬದುಕು ಪರಿಸರವನ್ನು ಅವಲಂಬಿಸಿದೆ. ಸೇವಿಸುವ ಆಹಾರ, ಉಸಿರಾಡುವ ಗಾಳಿ, ಕುಡಿಯುವ ನೀರು – ಹೀಗೆ ಪ್ರತಿಯೊಂದು ಮನುಷ್ಯನ ಬೇಡಿಕೆಗಳನ್ನು ಈಡೇರಿಸುವುದು ಪರಿಸರ ಮತ್ತು ಪ್ರಕೃತಿ. ಇದೇ ಪರಿಸರ ಮನುಷ್ಯನಿಗೆ ಒಂದು ಪ್ರಮುಖ ವರವಾಗಿದೆ. ಮನುಷ್ಯನ ಅತಿಯಾದ ದುರಾಸೆ ಇಂದು ಪ್ರಕೃತಿ ವಿಕೋಪಕ್ಕೆ ಕಾರಣವಾಗುತ್ತಿದೆ. ಪ್ರಕೃತಿಯ ತತ್ವಗಳಿಂದಲೇ ಮನುಷ್ಯ ಸೃಷ್ಟಿಯಾಗಿರುವ ಸತ್ಯವನ್ನು ವಾಸ್ತವ ಪ್ರಪಂಚದಲ್ಲಿ ಮನುಷ್ಯ ಮರೆತಂತೆ, ಬದುಕಲು ತೊಡಗಿದಂತೆ ಕಾಣಲಾರಂಭಿಸಿದೆ. ಇಂತಹ ಮರೆವು ಭವಿಷ್ಯದಲ್ಲಿ ಇಡೀ ಮಾನವ ಕುಲವನ್ನೇ ನಾಶಮಾಡಲು ಕಾರಣವಾಗಬಹುದು. ಮನುಷ್ಯನ ಅತಿ ಬುದ್ಧಿವಂತಿಕೆ, ತಾನು ಮಾಡಿದ್ದೇ ಸರಿ ಎಂಬ ಉದ್ಧಟತನ ಇವೆಲ್ಲವೂ ಪ್ರಕೃತಿಯ ಎದುರು ಸವಾಲೆಸೆದಂತೆ ಕಾಣುತ್ತಿದೆ. ಬುದ್ಧಿವಂತನಾದ ಮಾನವ ಪ್ರಕೃತಿಯನ್ನು ಬೇಕಾಬಿಟ್ಟಿ ಬಳಸಿಕೊಳ್ಳುತ್ತಿದ್ದಾನೆ. ತನ್ನ ಇರುವಿಕೆಯ ಪ್ರತಿರೂಪವಾಗಿ ತಾನು ಬಳಸಿದ ಪ್ಲಾಸ್ಟಿಕ್ ವಸ್ತುಗಳನ್ನು ಎಲ್ಲೆಂದರಲ್ಲೆ ಎಸೆಯುತ್ತಿದ್ದಾನೆ. ಆದರೆ ಮಾನವರಂತೆ ಮಾತೇ ಬಾರದ ಪ್ರಾಣಿ–ಪಕ್ಷಿಗಳು ಎಂದೂ ಪ್ರಕೃತಿಗೆ ಹಾನಿ ಮಾಡುವ ನಿದರ್ಶನಗಳಿಲ್ಲ.

ಮಾನವ ಸಂಸ್ಕೃತಿ ಮತ್ತು ಸಾಹಿತ್ಯವು ಪ್ರಕೃತಿಯಿಂದ ಉದ್ಭವಿಸಿದವು. ಕನ್ನಡ ವಚನ ಸಾಹಿತ್ಯದಲ್ಲಿ ಇದನ್ನು ನಾವು ಕಾಣಬಹುದು. ಬಹುತೇಕ ವಚನಗಳು ಪ್ರಕೃತಿಯನ್ನೇ ಉದಾಹರಿಸಿಯೋ, ಹೋಲಿಸಿಯೋ ಪ್ರಸ್ತುತಗೊಂಡದ್ದಿದೆ. ವಚನ ಸಾಹಿತ್ಯದ ಪ್ರಾಮುಖ್ಯ ಇರುವುದೇ ಅದರ ಬಹುಮುಖ್ಯ ಸಂವೇದನೆಯಲ್ಲಿ. ಹಾಗಾಗಿ 12ನೇ ಶತಮಾನದ ವಚನ ಚಳವಳಿ ಸಾಮಾಜಿಕ ಕ್ರಾಂತಿಯ ಜೊತೆಗೆ ಪರಿಸರ ಸಂವೇದನೆಯನ್ನೂ ಒಳಗೊಂಡಿತ್ತು. ವಚನಕಾರರು ಪ್ರಕೃತಿಯನ್ನು ಮಾನವನ ಅಧೀನದಲ್ಲಿರುವ ವಸ್ತುವಾಗಿ ಅಲ್ಲದೆ, ಅವನ ಅಸ್ತಿತ್ವದ ಅವಿಭಾಜ್ಯ ಅಂಗವಾಗಿ ನೋಡಿದರು. ಪ್ರಕೃತಿಯನ್ನು ಸಾಹಿತ್ಯವಾಗಿಸಿದ ಅದೆಷ್ಟೋ ಸಾಹಿತ್ಯ ಪ್ರಕಾರಗಳು ಕನ್ನಡದಲ್ಲಿ ಇವೆ. ಆದರೆ ವಚನ ಸಾಹಿತ್ಯ ಸುಮಾರು 10 ಶತಮಾನಗಳ ಹಿಂದೆಯೇ ಪ್ರಸ್ತುತ ನಡೆಯುತ್ತಿರುವ ಪ್ರಾಕೃತಿಕ ವಿದ್ಯಮಾನಗಳಿಗೆ ಮುನ್ನೆಚ್ಚರಿಕೆಯನ್ನು ನೀಡಿದಂತಿದೆ. ವೈಜ್ಞಾನಿಕವಾಗಿ ಹಾಗೂ ತಾಂತ್ರಿಕವಾಗಿ ಎಷ್ಟೇ ಅಭಿವೃದ್ಧಿಯನ್ನು

ಕಂಡರೂ ಪ್ರಕೃತಿಯ ಆಟದೆದುರು ಯಾವುದೂ ನಿಲ್ಲಲು ಸಾಧ್ಯವಿಲ್ಲ.

ವಚನ ಸಾಹಿತ್ಯದಲ್ಲಿ ಪ್ರಕೃತಿ ಮತ್ತು ಮಾನವನ ನಡುವಿನ ಸಂಬಂಧವನ್ನು ಚಿತ್ರಿಸಿದ್ದನ್ನು ಕಾಣುತ್ತೇವೆ. ಪರಿಸರ–ಮನುಷ್ಯನ ಸುತ್ತಮುತ್ತಲಿನ ಹೊರಲೋಕವಾದರೂ ಒಂದಕ್ಕೊಂದು ಅಂತರ್ಭಾವ ಸಂಬಂಧವನ್ನು ಕಲ್ಪಿಸಿದೆ. 12ನೇ ಶತಮಾನದಲ್ಲಿ ವಚನಕಾರರು ತಮ್ಮ ವಚನಗಳ ಮೂಲಕ ಪ್ರಕೃತಿಯ ಅಸ್ಮಿತೆಯನ್ನು ಮನಗಂಡಿದ್ದರು. ಹಾಗಾಗಿ ಮುಂದಿನ ದಿನಗಳಲ್ಲಿ ಆಗಬಹುದಾದ ಅನಾಹುತಗಳ ಬಗ್ಗೆ ಕೂಡ ಎಚ್ಚರಿಸಿದ್ದರು.

**"ಒಲೆ ಹತ್ತಿ ಉರಿದೊಡೆ ನಿಲಬಹುದಲ್ಲದೆ**
**ಧರೆ ಹತ್ತಿ ಉರಿದಡೆ ನಿಲಲುಬಹುದೆ?**
**ಧರೆ ಹತ್ತಿ ಉರಿದಡೆ ನಿಲಲು ಬಾರದು."**

ಎಂಬ ಬಸವಣ್ಣನ ವಚನದ ಸಾಲುಗಳು ಪ್ರಕೃತಿಯ ಮುಂದೆ ಮಾನವನ ಆಟ ನಡೆಯಲಾರದು ಎಂಬುದನ್ನು ಮಾರ್ಮಿಕವಾಗಿ ತಿಳಿಸಿದಂತಿದೆ. ಇತ್ತೀಚಿನ ದಿನಗಳಲ್ಲಿ ನಡೆಯುತ್ತಿರುವ ಪ್ರಕೃತಿ ವಿಕೋಪಗಳು ನಮ್ಮ ಕಣ್ಣ ಮುಂದೆ ಜ್ವಲಂತ ಸಾಕ್ಷಿಯಾಗಿ ನಿಂತಿವೆ.

21ನೇ ಶತಮಾನದಲ್ಲಿ ಆಧುನಿಕವಾಗಿ ಜ್ಞಾನ–ತಂತ್ರಜ್ಞಾನಗಳ ನೆರಳಲ್ಲಿ ಬದುಕುತ್ತಿರುವ ನಮಗೆ ಶುಚಿತ್ವದ ಬಗ್ಗೆ ಜನಜಾಗೃತಿ ಮಾಡುವ ಕೆಲಸಗಳಾಗುತ್ತಿವೆ. ಆದರೆ ವಚನಕಾರರು 12ನೇ ಶತಮಾನದಲ್ಲಿಯೇ ಶುಚಿತ್ವದ ಬಗ್ಗೆ ಮಾತನಾಡುತ್ತಾರೆ. ಬಸವಣ್ಣ ಅಂತರಂಗ ಬಹಿರಂಗ ಶುದ್ಧಿಗಳ ಬಗ್ಗೆಯೂ ವಿಚಾರ ಮಾಡುತ್ತಾರೆ. ಮನುಷ್ಯನ ಅಂತರಂಗ ಶುದ್ಧಿ ಬಹಿರಂಗ ಶುದ್ಧಿಗಳಿಗೆ ದಾರಿ ಮಾಡಿಕೊಡುವ ವಿಚಾರಗಳು ಕೂಡ ವ್ಯಕ್ತವಾಗುವುದನ್ನು ಗಮನಿಸಬಹುದು. ಕಾಯಕ, ದಾಸೋಹ, ಸಮತೆ, ನಿರಹಂಕಾರ ಎಲ್ಲವೂ ಪ್ರಕೃತಿ ಸ್ನೇಹಿ ಚಿಂತನೆಗೆ ದಾರಿ ಮಾಡಿಕೊಡುತ್ತವೆ.

ಪ್ರಕೃತಿಯೊಂದಿಗೆ ಹೊಂದಾಣಿಕೆಯಿಂದ ಬದುಕುವುದೇ ನಿಜವಾದ ಧರ್ಮ ಎಂಬ ಸಂದೇಶ ವಚನಗಳಲ್ಲಿ ಸ್ಪಷ್ಟವಾಗಿದೆ. ಪ್ರಕೃತಿಯನ್ನೇ ದೇವರೆಂದು ಆರಾಧಿಸುವ ನಮ್ಮ ನಂಬಿಕೆಗಳು ಸಾರ್ವಕಾಲಿಕವಾಗಿ ಪ್ರಸ್ತುತತೆಯನ್ನು ಕಾಣುತ್ತವೆ. ಹಾಗಾಗಿಯೇ ಬಸವಣ್ಣನ ವಚನಗಳಲ್ಲಿ ಪ್ರಕೃತಿ ದೇವಸಾನ್ನಿಧ್ಯದ ರೂಪವಾಗಿ ಕಾಣಿಸುತ್ತದೆ. 'ಕಾಯಕವೇ ಕೈಲಾಸ' ಎಂದ ಬಸವಣ್ಣನ ಮಾತುಗಳು ತಾನು ಮಾಡುವ ಕೆಲಸದಲ್ಲಿ ಶಿವನನ್ನು ಕಾಣಬೇಕು ಎಂದು ಹೇಳುತ್ತವೆ. ಬಸವಣ್ಣನು ದೇವಾಲಯದ ಕಟ್ಟಡಗಳಿಗಿಂತ ಶರೀರವನ್ನೇ ದೇವಾಲಯವಾಗಿಸಿ ಶರೀರದ ಅವಯವಗಳನ್ನು ಪೂಜಿಸುವ ತತ್ವವನ್ನು ಹೇಳುತ್ತಾರೆ.

ಆಚಾರ ವಿಚಾರಗಳಿಂದ ಬೆಳೆದ ಭಕ್ತಿಯ ಪರಿಪೂರ್ಣ ಸ್ವರೂಪವನ್ನು ತನ್ನ ವಚನಗಳಲ್ಲಿ ಹೇಳುತ್ತಾ, ಯಾವುದೇ ಬೆಳೆ ಬೆಳೆಯಬೇಕಾದರೆ ಪ್ರಕೃತಿಯ ಪೂರಕ ವಾತಾವರಣವು ಅತ್ಯಗತ್ಯ. ಪ್ರಕೃತಿಗಿಂತ ಮಿಗಿಲು ಯಾವುದೂ ಇಲ್ಲ. ಇಲ್ಲಿ ಭಕ್ತಿಯೇ

ಭೂಮಿ. ಶ್ರದ್ಧೆ ಮತ್ತು ಭಕ್ತಿಯೆಂಬ ವೃಷ್ಟಿ ಇದೆ. ಅರಿವಿನ ಬೀಜ, ಲಿಂಗವೆಂಬ ಎಲೆಯು ವಿಕಸಿತಗೊಂಡು ಸಸ್ಯದ ಸಮಗ್ರ ಬೆಳವಣಿಗೆಯಾಗಿ, ಜ್ಞಾನವೆಂಬ ಬೆಳೆ ಬೆಳೆಯುತ್ತದೆ. ಈ ವಿಚಾರಗಳ ಅರಳುವಿಕೆಯನ್ನು ಬಸವಣ್ಣ ಹೂವಾಗಿ ಕಂಡಿದ್ದಾರೆ. ಸೃಷ್ಟಿಯೊಳಗಿನ ಸಸಿಯ ಬೆಳವಣಿಗೆಯನ್ನು ಭಕ್ತನ ಅಂತರಂಗದ ವಿಕಾಸಕ್ಕೆ ಹೋಲಿಸುವ ಬಸವಣ್ಣನವರ ಪರಿ ಅತ್ಯಂತ ಅರ್ಥಪೂರ್ಣವಾಗಿದೆ.

ಭೂಮಿ ನಮ್ಮನ್ನೆಲ್ಲ ಹೊತ್ತು ನಿಂತ ಮಾತೆ. ಭೂಮಿಯ ನಾಶವಾದರೆ ಯಾವ ಜೀವರಾಶಿಗೂ ನೆಲೆ ಇಲ್ಲ ಎಂಬುದನ್ನು ಚೆನ್ನಬಸವಣ್ಣ ತನ್ನ ವಚನದಲ್ಲಿ ಮಾರ್ಮಿಕವಾಗಿ ತಿಳಿಸಿದ್ದು ಹೀಗೆ:

**ಭೂಮಿ ನಷ್ಟವಾದರೆ ಜಲಕ್ಕಿಂಬಿಲ್ಲ**
**ಜಲನಷ್ಟವಾದರೆ ಇಂದ್ರಿಯಕ್ಕಿಂಬಿಲ್ಲ**
**ಇಂದ್ರಿಯ ನಷ್ಟವಾದರೆ ಜಂಗಮಕ್ಕಿಂಬಿಲ್ಲ**
**ಜಂಗಮಕ್ಕೆ ನಷ್ಟವಾದರೆ ಲಿಂಗಕ್ಕಿಂಬಿಲ್ಲ**
**ಜಂಗಮ ಇದು ಕಾರಣ,**
**ಕರಣಾದಿಗಳ ಬಿಡದೆ ಅನುಪ್ರತಿಯೆಂಬವರ ತೋರಯ್ಯಾ**
**ಕೂಡಲ ಚೆನ್ನಸಂಗಮದೇವಾ.**

(ಸಮಗ್ರ ವಚನಸಂಪುಟ: ಒಂದು –2017/ಪುಟಸಂಖ್ಯೆ –308/ವಚನ ಸಂಖ್ಯೆ–129)

ಭೂಮಿಯನ್ನು ಕಾಪಾಡಿಕೊಳ್ಳುವ ಜವಾಬ್ದಾರಿಯನ್ನು ಈ ವಚನದ ಮೂಲಕ ಚೆನ್ನಬಸವಣ್ಣ ತಿಳಿಸಿದ್ದಾರೆ. ಭೂಮಿ ನಷ್ಟವಾದರೆ ನೀರಿಗೆ ಆಶ್ರಯವಿಲ್ಲ. ನೀರಿಲ್ಲದಿದ್ದರೆ ಬದುಕುವುದಾದರೂ ಹೇಗೆ ಎನ್ನುವ ಪ್ರಶ್ನೆಯನ್ನು ಇಂದು ನಮಗೆ ನಾವೇ ಹಾಕಿಕೊಳ್ಳಬೇಕಾದ ಅವಶ್ಯಕತೆಯಿದೆ. ವಾಸ್ತವ ಪ್ರಜ್ಞೆಯನ್ನು ಬೆಳೆಸಿಕೊಳ್ಳುವ ಅಗತ್ಯತೆಯನ್ನು ಅವರು ಮನಗಂಡಿದ್ದಾರೆ. ಈ ಭೂಮಿಯನ್ನು ತಾಯಿಯೆಂದು ಆರಾಧಿಸುವ ನಮ್ಮ ಹಿರೀಕರಲ್ಲಿ ಇದ್ದದ್ದು ಪ್ರಕೃತಿಯ ಮೇಲಿನ ಭಕ್ತಿ. ಇದನ್ನೇ ನಮ್ಮ ಚೆನ್ನಬಸವಣ್ಣ ಹೀಗೆ ಹೇಳುತ್ತಾರೆ:

**ನಾನು ಮೆಟ್ಟುವ ಭೂಮಿಯ ಭಕ್ತನ ಮಾಡಿದಲ್ಲದೆ ಮೆಟ್ಟೆನಯ್ಯಾ**
**ನಾ ನೋಡುತಿಹ ಆಕಾಶದ ಚಂದ್ರಸೂರ್ಯರ**
**ಭಕ್ತರ ಮಾಡಿದಲ್ಲದೆ ನಾ ನೋಡೆನಯ್ಯಾ**
**ಆಲವ ಭಕ್ತನ ಮಾಡಿದಲ್ಲದೆ ನಾನು ಬಳಸೆನಯ್ಯಾ**
**ನಾನು ಕೊಂಬ ಹದಿನೆಂಟು ಧಾನ್ಯವ ಭಕ್ತನ ಮಾಡಿದಲ್ಲದೆ**
**ಕೊಳ್ಳೆನು ಕೂಡಲಚೆನ್ನಸಂಗಾ ನಿಮ್ಮಾಣೆ.**

(ಶಿವಶರಣರ ವಚನ ಸಂಪುಟ. ವ.89)

ಪ್ರಕೃತಿಯು ಮನುಷ್ಯನನ್ನು ಸರ್ವರೀತಿಯಲ್ಲೂ ಪೊರೆಯುವಳು. ಅದೇ ರೀತಿ ಪ್ರಕೃತಿಯನ್ನೇ ಅವಲಂಬಿಸಿ ಬದುಕುವ ಮನುಷ್ಯನಿಗೆ ಪ್ರಕೃತಿಯೇ ವರದಾನ. ತನ್ನ ಜೀವಿತಾವಧಿಯಲ್ಲಿ ಜೀವನ ಸಾಗಿಸಲು ಬೇಕಾದುದೆಲ್ಲವನ್ನೂ ಪ್ರಕೃತಿಯಿಂದಲೇ ಪಡೆದುಕೊಳ್ಳುತ್ತಾನೆ. ಮೇಲೆ ಉಲ್ಲೇಖಿಸಿದಂತೆ ಚೆನ್ನಬಸವಣ್ಣನವರ ವಚನದಲ್ಲೂ ಅದೇ ಆಶಯವಿದೆ.

ಭಕ್ತಿ ಭಾವದಿಂದ ಕಾಣುವ ಪ್ರಕೃತಿಯಲ್ಲಿ, ಆಕಾಶದಲ್ಲಿ ಕಾಣುವ ಸೂರ್ಯ–ಚಂದ್ರರು, ಕಾಲಕಾಲಕ್ಕೆ ಬರುವ ಮಳೆ, ಬಿಸಿಲು, ಗಾಳಿ ಎಲ್ಲವನ್ನೂ ಭಕ್ತಿಯಿಂದ ಗೌರವಿಸುವ ತತ್ವವನ್ನು ವಚನಗಳಲ್ಲಿ ಕಾಣಬಹುದು. ಪ್ರಕೃತಿಯೆಂದರೆ ಕೇವಲ ಮನುಷ್ಯ ಮಾತ್ರ ಇದ್ದರೆ ಸಾಧ್ಯವಿಲ್ಲ. ಅಜೈವಿಕವಾದ ಬೆಟ್ಟಗುಡ್ಡ, ಮಣ್ಣಿನಿಂದ ಕೂಡಿದ ಪ್ರದೇಶಗಳು, ಜೈವಿಕ ಸಸ್ಯಗಳು, ಕ್ರಿಮಿಕೀಟಗಳು, ಪ್ರಾಣಿ–ಪಕ್ಷಿಗಳು, ಜಂತುಗಳು ಇವೆಲ್ಲವೂ ಒಟ್ಟಾಗಿ ಇದ್ದರೆ ಅದು ಪ್ರಕೃತಿ ಎನಿಸಿಕೊಳ್ಳುತ್ತದೆ. ಪೂರ್ಣಚಂದ್ರ ತೇಜಸ್ವಿಯವರು ಒಂದು ಕಡೆ ಉಲ್ಲೇಖಿಸಿದಂತೆ, "ಒಂದು ಕಾಡು ನಿರ್ಮಾಣ ಆಗಬೇಕಾದರೆ ಅಲ್ಲಿ ಕೇವಲ ಮರಗಳನ್ನು ನೆಟ್ಟರೆ ಸಾಲುವುದಿಲ್ಲ. ಅಲ್ಲಿ ಗಿಡ–ಮರ–ಬಳ್ಳಿ, ಪ್ರಾಣಿ–ಪಕ್ಷಿಗಳು, ಕಲ್ಲು, ಮಣ್ಣು ಎಲ್ಲವೂ ಇರಬೇಕು. ಆಗ ಕಾಡು ಸೃಷ್ಟಿಯಾಗುವುದಕ್ಕೆ ಸಾಧ್ಯ" ಎಂದಿದ್ದಾರೆ.

ಅಲ್ಲಮಪ್ರಭು ಪ್ರಕೃತಿಯನ್ನು ತತ್ವದ ಆಧಾರದಲ್ಲಿ ಗ್ರಹಿಸುತ್ತಾರೆ. ಪ್ರಕೃತಿಯ ಹೊರ ರೂಪಕ್ಕಿಂತ ಅದರೊಳಗಿನ ತತ್ವವೇ ಮುಖ್ಯವೆಂದು ಅಲ್ಲಮ ಹೇಳುವುದನ್ನು ನೋಡುತ್ತೇವೆ. ಪ್ರಕೃತಿ ಮತ್ತು ಶಿವ ವಿಭಿನ್ನವಲ್ಲ ಎಂಬ ಅದ್ವೈತ ಭಾವನೆ ಕೂಡ ಇಲ್ಲಿ ವ್ಯಕ್ತವಾಗುತ್ತದೆ. ಮುಖ್ಯವಾಗಿ ಪ್ರಕೃತಿಯಲ್ಲಿ ಶಿವತ್ವವನ್ನು ಕಾಣುವುದು ಅಲ್ಲಮಪ್ರಭುವಿನ ವಿಶೇಷತೆ. ಇಂದು ನಾವು ರಾಸಾಯನಿಕಯುಕ್ತವಾದ ಆಹಾರಗಳನ್ನು ಸೇವಿಸುವುದು ಅನಿವಾರ್ಯವಾಗಿಬಿಟ್ಟಿದೆ. ಪ್ರತಿಯೊಂದು ವಸ್ತುವನ್ನು ಸ್ವೀಕರಿಸಿ, ಸಂಸ್ಕರಿಸಿ ಬಳಸಿದಾಗ ರಾಸಾಯನಿಕವನ್ನು ಬಳಸುವುದು ಅನಿವಾರ್ಯವಾಗಿರುತ್ತದೆ. ಈ ಬಗ್ಗೆ ಅಲ್ಲಮಪ್ರಭು ತನ್ನ ವಚನದಲ್ಲಿ ಹೇಳಿದ್ದು ಹೀಗೆ:

**ಒತ್ತಿ ಹಣ್ಣು ಮಾಡಿದಂತೆ ಅದೆತ್ತಣ ರುಚಿಯಪ್ಪುದೊ?**
**ಕಾಮಿಸಿ ಕಲ್ಪಿಸಿ ಭಾವಿಸಿದಡೆ ಅದೆ ಭಂಗ**
**ಭಾವಿಸುವ ಭಾವನೆಗಿಂತ ಅಭಾವ ಲೇಸು ಕಾಣಾ ಗುಹೇಶ್ವರಾ.**
(ಸಮಗ್ರ ವಚನಸಂಪುಟ: ಒಂದು 2016/ಪುಟ ಸಂಖ್ಯೆ–188/ ವಚನ ಸಂಖ್ಯೆ–646)

ಕಾಯಿಯು ತಾನಾಗಿಯೇ ಪ್ರಕೃತಿದತ್ತವಾಗಿ ಹಣ್ಣಾಗಬೇಕು. ಆಗ ಅದರ ರುಚಿ ಅತ್ಯಂತ ಮಧುರವಾಗಿರುತ್ತದೆ. ಆದರೆ ನಮ್ಮ ಅವಸರಕ್ಕಾಗಿ, ನಮ್ಮ ಧಾವಂತಕ್ಕಾಗಿ ಮತ್ತು ಬೇಗಬೇಗ ಹಣ ಮಾಡುವ ದುರುದ್ದೇಶದಿಂದ ಒತ್ತಿ ಒತ್ತಿ ಮತ್ತು ರಾಸಾಯನಿಕಗಳನ್ನು ಬಳಸಿ ಕೃತಕವಾಗಿ ಹಣ್ಣು ಮಾಡಿದರೆ ಅದರ ರುಚಿ ಹೊರಟುಹೋಗುತ್ತದೆ. ಆರೋಗ್ಯದ ಬಗ್ಗೆ ಎಚ್ಚರಿಕೆಯನ್ನು ವಹಿಸದೆ ಇದ್ದರೆ ಮುಂದೆ ಆರೋಗ್ಯ ಸಮಸ್ಯೆಗಳು ಕಾಡುವುದು ಸಹಜ. ಇಂತಹ ಅವಘಡಗಳನ್ನು 12ನೇ ಶತಮಾನದಲ್ಲಿ ಕೂಡಾ ಶರಣರು ಎಚ್ಚರಿಸಿದ್ದರು ಎನ್ನುವುದನ್ನು ನಾವು ಗಮನಿಸಬೇಕು. ಎಲ್ಲಾ ಕ್ಷೇತ್ರಗಳಲ್ಲೂ ಸ್ವಾರ್ಥ, ಮೋಸ, ವಂಚನೆ, ಶೋಷಕ ಪ್ರವೃತ್ತಿ ಹೆಚ್ಚುತ್ತಿರುವ ಸಮಾಜದಲ್ಲಿ ಮನುಷ್ಯನನ್ನು ಮನುಷ್ಯನಾಗಿ ನೋಡುವ ಬದಲಿಗೆ ತನ್ನ ಸ್ವಾರ್ಥ ಸಾಧನೆಯ ವಸ್ತುವಾಗಿ ಬಳಸಿಕೊಳ್ಳಲಾಗಿದೆ.

ಕನ್ನಡ ಸಾಹಿತ್ಯದ ಮೊದಲ ವಚನಕಾರ್ತಿ ಅಕ್ಕಮಹಾದೇವಿ ಪ್ರಕೃತಿಯನ್ನು

ತನ್ನ ಆತ್ಮ ಸಹಚರಿಯಾಗಿ ಕಾಣುತ್ತಾರೆ. ಆಕೆಯ ನಿರೂಪಣೆ ಪ್ರತ್ಯಕ್ಷವಾಗಿರದೆ ಅದು ಪರೋಕ್ಷವಾಗಿ ಕಾಣಿಸುತ್ತದೆ. ಆರಾಧಿಸುವ ದೈವವನ್ನು ಕೂಡುವುದೆಂದರೆ ಅದು ಒಂದು ಬಗೆಯಲ್ಲಿ ಪರಿಸರದ ಪಂಚಭೂತಗಳಾದ ಜಲ, ವಾಯು, ಅಗ್ನಿ, ಆಕಾಶ, ಮಣ್ಣು(ಭೂಮಿ)– ಇವುಗಳೊಂದಿಗೆ ಸಮ್ಮಿಳಿತವಾಗುವುದು, ಲೀನವಾಗುವುದು ಎಂದಾಗಿದೆ. ಅಕ್ಕನ ಈ ಬಗೆಯ ನಿರೂಪಣೆಯಲ್ಲಿ ಅನುಭಾವ ಲೋಕ ಮತ್ತು ಜೈವಿಕ ವ್ಯವಸ್ಥೆಗಳನ್ನು ಸಮೀಕರಿಸಿ ಬಿಡುತ್ತಾರೆ. ಅದನ್ನು ಪರಿಸರವಾದಿ ವಿಮರ್ಶಕರು 'ಪರಿಸರ ಅನುಭಾವ ಕಾವ್ಯ' ಎಂದು ಹೆಸರಿಸುತ್ತಾರೆ. ಅಂತಹ ಕಾವ್ಯದ ರಚನೆಯನ್ನು ಕುವೆಂಪು ಅವರಲ್ಲಿಯೂ, ತೇಜಸ್ವಿಯವರಲ್ಲಿಯೂ ಕಾಣುತ್ತೇವೆ.

ಜೈವಿಕ ತಾಣಗಳಿಗೂ ನಿರ್ದಿಷ್ಟ ಪರಿಸರದ ಜೀವಿಗಳಿಗೂ ಸಾವಯವ ಸಂಬಂಧವಿರುತ್ತದೆ. ಗಿರಿ–ನವಿಲು, ಕೊಳ–ಹಂಸ, ಮಾಮರ–ಕೋಗಿಲೆ, ಪರಿಮಳ–ಭ್ರಮರ ಈ ಮೊದಲಾದವುಗಳಲ್ಲಿರುವ ಸಂಬಂಧವು ಒಂದಕ್ಕೊಂದು ಅಂತರಸಂಬಂಧವನ್ನು ಕಲ್ಪಿಸುತ್ತದೆ. ಈ ರೀತಿಯ ಪರಿಕಲ್ಪನೆ ಅಕ್ಕನ ವಚನಗಳಲ್ಲಿ ಬಹಳ ಆಪ್ತವಾಗಿ ಕಾಡುತ್ತದೆ. ಪ್ರಕೃತಿಯಲ್ಲಿನ ಅವಿನಾಭಾವ ಸಂಬಂಧದಂತೆ ತನಗೆ ಮತ್ತು ಚೆನ್ನಮಲ್ಲಿಕಾರ್ಜುನನಿಗೂ ಬಂಧುರತೆ ಇರುವುದನ್ನು ಅಕ್ಕ ನಿರೂಪಿಸುತ್ತಾಳೆ. ಗಂಡನ ಮನೆಯಿಂದ ಹೊರಬಂದ ಅಕ್ಕಮಹಾದೇವಿ ಪ್ರಕೃತಿಯ ಕಣಕಣದಲ್ಲೂ ತನ್ನ ಪತಿಯನ್ನು ಹುಡುಕುವ ಪರಿ ಅತ್ಯಂತ ಅಭೇದ್ಯವಾದದ್ದು. ಗಿರಿ ಗಹ್ವರಗಳಲ್ಲಿ, ಪ್ರಾಣಿ–ಪಕ್ಷಿಗಳಲ್ಲಿ, ದುಂಬಿಗಳಲ್ಲಿ "ತನ್ನ ಪತಿಯನ್ನು ಕಂಡಿದ್ದೀರಾ?" ಎಂದು ಕೇಳುವಾಗ ಪರಿಸರದಲ್ಲಿನ ಪ್ರತಿಯೊಂದು ಜೀವರಾಶಿಗಳಿಗೂ ತನ್ನದೇ ಆದ ಭಾವನಾತ್ಮಕ ಸಂಬಂಧ ಇರುವುದನ್ನು ವ್ಯಕ್ತಪಡಿಸುತ್ತದೆ. ಮನುಷ್ಯ ಸ್ಪಂದಿಸದೇ ಇದ್ದರೂ ಪ್ರಕೃತಿ ತನ್ನನ್ನು ಕೈಬಿಡಲಾರದು ಎಂಬ ಅಗಾಧವಾದ ನಂಬಿಕೆ ಆಕೆಯದು. ಅಕ್ಕನ ಭಾವದಲ್ಲಿ ಪ್ರಕೃತಿಯ ಕಣಕಣವೂ ಜೀವಂತಿಕೆಯಿಂದ ತುಂಬಿದೆ. ಆಕೆಯ ಒಂದು ವಚನದಲ್ಲಿ ತನ್ನ ಆತ್ಮದ ಪತಿ ಮಲ್ಲಿಕಾರ್ಜುನನ ಹುಡುಕಾಟದಲ್ಲಿ ತನ್ನ ಸುತ್ತಮುತ್ತಲೂ ಆವರಿಸಿರುವ ಇಡೀ ಪ್ರಕೃತಿಯ ಮೊರೆಹೋಗುತ್ತಾಳೆ.

**ಉಪಸಂಹಾರ:**

ನಮ್ಮ ಬುದ್ಧಿವಂತಿಕೆಯೇ ಪ್ರಕೃತಿಯ ವಿನಾಶಕ್ಕೆ ಕಾರಣ ಎಂಬುದನ್ನು ನಾವು ಅರ್ಥಮಾಡಿಕೊಳ್ಳಬೇಕು. ಪ್ರಕೃತಿ ನಮ್ಮ ಆಸೆಯನ್ನು ಈಡೇರಿಸಬಲ್ಲುದು. ಆದರೆ ನಮ್ಮ ದುರಾಸೆಯನ್ನಲ್ಲ ಎನ್ನುವುದು ಪರಮ ಸತ್ಯ. ಆಧುನಿಕತೆಯ ಭರಾಟೆಯಲ್ಲಿ 'ನಾನು–ನನ್ನದು' ಎಂಬ ಸ್ವಾರ್ಥದ ಬದುಕಿನ ಮಧ್ಯೆ ನಮ್ಮೆಲ್ಲರ ಆಸೆಯನ್ನು ಪೂರೈಸುತ್ತಿದ್ದ ಪ್ರಕೃತಿಮಾತೆ ಇಂದು ಜಡವಾಗುತ್ತಿದ್ದಾಳೆ. ಆಕೆಯ ಜಡತ್ವಕ್ಕೆ ನಾವೇ ನೇರವಾಗಿ ಹೊಣೆ ಎಂಬುದು ಗೊತ್ತಿದ್ದೂ ಗೊತ್ತಿಲ್ಲದಂತೆ ಬದುಕುತ್ತಿರುವುದು ದುರಂತ. ಈ ನಮ್ಮ ವಿಕೃತಿ ಪ್ರಕೃತಿಯನ್ನು ಸರ್ವನಾಶ ಮಾಡುತ್ತಿರುವುದು ನಮ್ಮ ಅತೀ ಬುದ್ಧಿವಂತಿಕೆಯ ಲಕ್ಷಣ. 12ನೆ ಶತಮಾನದಲ್ಲಿ ಪ್ರಕೃತಿಯ ಬಗೆಗಿನ ಕಾಳಜಿ ಇದ್ದರೂ, ಪ್ರಸ್ತುತ ಪ್ರಕೃತಿಯ ಮೇಲೆ ನಡೆಯುತ್ತಿರುವ ಅತ್ಯಾಚಾರ ಮಾತ್ರ ನಿಂತಿಲ್ಲ,

ನಿಲ್ಲುವ ಲಕ್ಷಣಗಳು ಕಾಣುತ್ತಿಲ್ಲ. ಈ ಕಾರಣದಿಂದ ಇಂದಿನ ಪರಿಸರ ಮಾಲಿನ್ಯ, ಅರಣ್ಯನಾಶ, ಜಲಸಂಕಷ್ಟಗಳ ಹಿನ್ನೆಲೆಯಲ್ಲಿ ವಚನ ಸಾಹಿತ್ಯದಲ್ಲಿ ವ್ಯಕ್ತವಾಗುವ ಪರಿಸರದ ಮೇಲಿನ ದೃಷ್ಟಿಕೋನ ಅತ್ಯಂತ ಪ್ರಸ್ತುತವಾಗಿದೆ. ವಚನಕಾರರ ಸರಳ ಜೀವನ, ಮಿತ ಉಪಭೋಗ ಮತ್ತು ಪ್ರಕೃತಿಯೊಂದಿಗಿನ ಸಹಬಾಳ್ವೆ ಎಂಬ ತತ್ವಗಳು ಇಂದಿನ ಪರಿಸರದ ಬಗೆಗಿನ ಚಿಂತನೆ, ಕಾಳಜಿಗಳಿಗೆ ದಾರಿದೀಪವಾಗುತ್ತದೆ. ಪ್ರಕೃತಿಯ ಕೂಸುಗಳಾದ ನಾವು ಪ್ರಕೃತಿಗೆ, ನಮಗೆ ಲಭಿಸಿದ ಪರಿಸರಕ್ಕೆ ಪೂರಕವಾಗಿ ಮಾನವೀಯತೆಯಿಂದ ಬದುಕು ನಿರ್ವಹಿಸಬೇಕಾದ ಅಗತ್ಯವಿದೆ. ಪರಿಸರ ಸ್ನೇಹಿ ಜೀವನ ನಮ್ಮದಾಗಬೇಕಾಗಿದೆ. ಆಗಲೇ ಪ್ರಕೃತಿ ಮಾತೆ ಸದಾ ವರದಾಯಿನಿಯಾಗಿ ನಮ್ಮನ್ನು ಹರಸಲು, ಉದ್ಧರಿಸಲು ಸಾಧ್ಯ.

**ಪರಾಮರ್ಶನ ಗ್ರಂಥಗಳು:**


1. ನಾರಾಯಣ ಪಿ.ವಿ., (2005), ವಚನ ಸಮಗ್ರ, ಬೆಂಗಳೂರು: ವಸಂತ ಪ್ರಕಾಶನ.
2. ಸಿದ್ಧಲಿಂಗ ಸ್ವಾಮಿ, (2014), ವಚನ ಧರ್ಮಸಾರ, ಮೈಸೂರು: ಜಿ.ಶ್ರೀ. ಕ್ರಿಯೇಶನ್ಸ್.
3. ಶಿವಪ್ಪ ಕೆ.ಸಿ., (2017), ವಚನ ದರ್ಶನ, ಬೆಂಗಳೂರು: ಅಭಿನವ.
4. ವಿಜಯಕುಮಾರ ಕಮ್ಮಾರ (ಸಂ), (2024), ವಚನ ಸಾಹಿತ್ಯ ಮತ್ತು ಪರಿಸರ ಪ್ರಜ್ಞೆ, ಹುಬ್ಬಳ್ಳಿ: ವಚನ ಸಾಹಿತ್ಯ ಮಂದಾರ ಫೌಂಡೇಶನ್.
5. ಕಲ್ಬುರ್ಗಿ ಎಂ.ಎಂ. (ಸಂ), (1994), ಸಮಗ್ರ ವಚನ ಸಂಪುಟ–ಒಂದು, ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ.